## ಪಂಚತಂತ್ರ ಕಥೆ

### ಪ್ರಾಣಿಗಳ ರಾಜನಾದ ಠಕ್ಕ ನರಿ

ಒಂದು ಕಾಡು. ಅಲ್ಲಿ ಚಂಡರವ ಎಂಬ ಒಂದು ನರಿ ವಾಸಿಸುತ್ತಿತ್ತು. ಒಂದು ದಿನ ಅದಕ್ಕೆ ತುಂಬ ಹಸಿವಾಯಿತು. ಆಹಾರ ಸಿಗಬಹುದೆಂಬ ಆಸೆಯಿಂದ, ಪಕ್ಕದ ನಗರವನ್ನು ಹೊಕ್ಕಿತು. ಅದನ್ನು ಕಂಡು, ನಗರದ ನಾಯಿಗಳೆಲ್ಲ ಅಟ್ಟಿಸಿಕೊಂಡು ಬಂದವು. ಅದರಿಂದ ಭಯಗೊಂಡ ನರಿ ತನ್ನನ್ನು ರಕ್ಷಿಸಿಕೊಳ್ಳಲು ಒಬ್ಬ ಅಗಸನ ಮನೆಯನ್ನು ಹೊಕ್ಕಿತು. ಅಗಸನು ಒಂದು ಬೋಗುಣಿಯ ತುಂಬ ನೀಲಿ ಹಾಕಿದ ನೀರನ್ನು ಇಟ್ಟಿದ್ದನು. ನರಿ ಹಿಂದೆ ಮುಂದೆ ನೋಡದೆ, ಅದರೊಳಕ್ಕೆ ಹಾರಿತು. ತಿರುಗಿ ಮೇಲೆ ಬಂದಾಗ ಅದರ ಮೈಯೆಲ್ಲ ನೀಲಿಯಾಗಿ ಹೋಗಿತ್ತು. ನಾಯಿಗಳಿಗೆ ಅದರ ಗುರುತು ಸಿಕ್ಕಲಿಲ್ಲ. ಅವು ಹೊರಟುಹೋದವು.

ಅನಂತರ ನರಿ ಕಾಡನ್ನು ಮತ್ತೆ ಹೊಕ್ಕಿತು. ನೀಲಿ ಬಣ್ಣದ ಈ ವಿಲಕ್ಷಣ ಪ್ರಾಣಿಯನ್ನು ಕಂಡು ಎಲ್ಲ ಪ್ರಾಣಿಗಳೂ ಹೆದರಿದವು. ಚಂಡರವ ಹೇಳಿತು:"ಏಕೆ ಹೆದರುತ್ತೀರಿ? ನನ್ನನ್ನು ಬ್ರಹ್ಮನೇ ವಿಶೇಷ ರೀತಿಯಲ್ಲಿ ಸೃಷ್ಟಿ ಮಾಡಿದ್ದಾನೆ; ಪ್ರಾಣಿಗಳ ರಾಜನಾಗುವಂತೆ ಅನುಗ್ರಹಿಸಿದ್ದಾನೆ. ಅದಕ್ಕೇ ನಾನಿಲ್ಲಿಗೆ ಬಂದಿದ್ದು. ನನ್ನ ಹೆಸರು ಕಕುದ್ರುಮ."

ಎಲ್ಲ ಪ್ರಾಣಿಗಳೂ ಅದನ್ನೇ ರಾಜನನ್ನಾಗಿ ಮಾಡಿಕೊಂಡವು. ಸಿಂಹ ಮಂತ್ರಿಯಾಯಿತು; ಇತರ ಪ್ರಾಣಿಗಳಿಗೆ ಆ ರಾಜ ಬೇರೆ ಬೇರೆ ಪದವಿಗಳನ್ನು ಕೊಟ್ಟಿತು; ಆದರೆ ತನ್ನ ಸ್ವಜನರಾದ ನರಿಗಳನ್ನು ಕಡೆಗಣಿಸಿತು.

ಈ ರೀತಿ ಕಾಲ ಕಳೆಯುತ್ತಿರುವಾಗ, ಕಕುದ್ರುಮವು ಒಂದು ದಿನ ದೂರದಲ್ಲಿ ನರಿಗಳು ಊಳಿಡುವುದನ್ನು ಕೇಳಿತು. ಅದಕ್ಕೆ ತುಂಬ ಸಂತೋಷವಾಯಿತು. ತನ್ನ ಕುಲದ ನೆನಪಾಗಿ, ತನ್ನ ಜಾತಿಬಾಂಧವರ ಕರೆಗೆ ಓಗೊಟ್ಟಂತೆ, ಕೂಗಿಬಿಟ್ಟಿತು. ಆ ಕೂಗನ್ನು ಕೇಳಿ, ಇತರ ಪ್ರಾಣಿಗಳು ಇದನ್ನು ಮೋಸಗಾರ ನರಿಯೆಂದು ಗುರುತಿಸಿದವು; ಕೋಪಗೊಂಡು ಅದನ್ನು ಕೊಂದು ಹಾಕಿದವು.

**ಆದ್ದರಿಂದ ನಾವು ಯಾವುದೇ ಪದವಿಗೆ ಅರ್ಹರಾಗಲು ಬೇಕಾದ ಗುಣಗಳನ್ನು ಬೆಳೆಸಿಕೊಳ್ಳಬೇಕೇ ಹೊರತು, ಪದವಿಯನ್ನು ಮೋಸದಿಂದ ಪಡೆಯಬಾರದು. ಹಾಗೆ ಮಾಡಿದರೆ, ವಿನಾಶ ಖಂಡಿತ.**



### ಸಂಸ್ಕೃತಿ ಪರಿಚಯ

**ಆಸ್ತಿಕ ದರ್ಶನಗಳು**

ಆಸ್ತಿಕ ದರ್ಶನಗಳೆಂದರೆ ವೇದವನ್ನು ಪರಮೋಚ್ಚ ಪ್ರಮಾಣವೆಂದು ಒಪ್ಪಿಕೊಳ್ಳುವ ಚಿಂತನಾ ವಿಧಾನಗಳು. ಅವುಗಳಲ್ಲಿ ಕೆಲವು ದೇವರನ್ನು ಒಪ್ಪಿಕೊಂಡರೆ, ಕೆಲವು ದೇವರ ಕಲ್ಪನೆಯ ಅವಶ್ಯಕತೆ ಇಲ್ಲ ಎಂದು ಹೇಳುತ್ತವೆ. ಇಂಥ ಆರು ದರ್ಶನಗಳನ್ನು ನಾವು ಅವುಗಳ ಸಮಾನ ಅಂಶಗಳ ಆಧಾರದ ಮೇಲೆ ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. ೧. **ಸಾಂಖ್ಯ, ಯೋಗ** ೨. **ನ್ಯಾಯ, ವೈಶೇಷಿಕ** ೩. **ಪೂರ್ವ ಮತ್ತು ಉತ್ತರ ಮೀಮಾಂಸಾ. ನ್ಯಾಯ ಮತ್ತು ವೈಶೇಷಿಕಗಳು** ಜಗತ್ತಿನಲ್ಲಿರುವ ದ್ರವ್ಯಗಳು, ಅವುಗಳ ಗುಣ, ಸ್ವಭಾವಗಳ ತರ್ಕಬದ್ಧ ವಿಶ್ಲೇಷಣೆಯನ್ನು ಮಾಡುತ್ತವೆ. ದ್ರವ್ಯಗಳ ಜ್ಞಾನದಿಂದಲೇ ಸಿದ್ಧಿ ಎಂದು ಇವು ನಂಬುತ್ತವೆ. ಈ ಸಿದ್ಧಾಂತಗಳ ಪ್ರವರ್ತಕರು ಕ್ರಮವಾಗಿ **ಗೌತಮ ಮತ್ತು ಕಣಾದರು. ಸಾಂಖ್ಯ ಮತ್ತು ಯೋಗಗಳು** ದ್ವೈತ ದರ್ಶನಗಳು. ಅವು ಪ್ರಕೃತಿ, ಪುರುಷ ಎಂಬ ಎರಡು ಅನಾದಿ ತತ್ತ್ವಗಳ ಪ್ರತ್ಯೇಕತೆಯನ್ನು ಒಪ್ಪಿಕೊಳ್ಳುತ್ತವೆ. ಪುರುಷನು ಚೈತನ್ಯಸ್ವರೂಪ ಮತ್ತು ಸಾಕ್ಷಿಯಾಗಿರುತ್ತಾನೆ. ಎಷ್ಟು ಜೀವಿಗಳಿರುವರೋ ಅಷ್ಟು ಪುರುಷರೂ ಇರುತ್ತಾರೆ. ಜಗತ್ತಿನ ಸೃಷ್ಟಿ ನಡೆಯುವುದು ಪ್ರಕೃತಿ ಎಂಬ ಜಡ ತತ್ತ್ವದಿಂದ. ಆದರೆ ಪ್ರಕೃತಿಯು ಪುರುಷನ ಸಾನ್ನಿಧ್ಯದಲ್ಲಿಯೇ ಪ್ರಪಂಚವಾಗಿ ಮಾರ್ಪಡಲು ಸಾಧ್ಯ ಎಂದು ಸಾಂಖ್ಯವು ಹೇಳುತ್ತದೆ. ಯೋಗವು ಸಾಂಖ್ಯದ ತತ್ತ್ವಗಳನ್ನು ಹೆಚ್ಚುಕಡಮೆ ಸ್ವೀಕರಿಸುತ್ತದೆ. ಮನಸ್ಸಿನ ನಿಯಂತ್ರಣವೇ ಯೋಗದ ಉದ್ದೇಶ. ಅದಕ್ಕಾಗಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಅಷ್ಟಾಂಗ ಯೋಗಕ್ರಿಯೆಯನ್ನು ಅದು ಉಪದೇಶಿಸುತ್ತದೆ. ಈ ಸಿದ್ಧಾಂತಗಳ ಪ್ರವರ್ತಕರು ಕ್ರಮವಾಗಿ **ಕಪಿಲ ಮತ್ತು ಪತಂಜಲಿ. ಪೂರ್ವಮೀಮಾಂಸಾ ಮತ್ತು ಉತ್ತರ ಮೀಮಾಂಸಾ ದರ್ಶನಗಳು** ನೇರವಾಗಿ ವೇದಗಳನ್ನು ಅವಲಂಬಿಸಿರುವ ದರ್ಶನಗಳು. ಪೂರ್ವಮೀಮಾಂಸಾ ಶಾಸ್ತ್ರವು ವೇದವಿಹಿತ ಕರ್ಮಗಳಿಗೆ ಪ್ರಾಧಾನ್ಯತೆ ಕೊಟ್ಟಿದೆ. ಉತ್ತರ ಮೀಮಾಂಸಾ ದರ್ಶನವು ವೇದಗಳಲ್ಲಿ ಹೇಳಿರುವ ಕರ್ಮಗಳಿಗಿಂತಲೂ ಉಪನಿಷತ್ತುಗಳಲ್ಲಿನ ಜ್ಞಾನಕಾಂಡಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತದೆ. ಇವುಗಳ ಪ್ರವರ್ತಕರು ಕ್ರಮವಾಗಿ **ಜೈಮಿನಿ ಮತ್ತು ಬಾದರಾಯಣ ವ್ಯಾಸ.**

**(ಮುಂದಿನ ತಿಂಗಳು: ರಾಮಾಯಣ)**


## ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣದಿಂದ ಕಲಿಯಬೇಕಾದ ಗುಣಗಳು

### ಶ್ರದ್ಧೆ

ಒಂದಾನೊಂದು ಕಾಲದಲ್ಲಿ 'ವಾಜಶ್ರವಸ್' ಎಂಬ ಋಷಿ ಇದ್ದನು. ಅವನು ವಿಶ್ವಜಿತ್ ಎಂಬ ಯಾಗವನ್ನು ಮಾಡಿದನು. ಆ ಯಜ್ಞವನ್ನು ಮಾಡಿದವರು ತಮ್ಮಲ್ಲಿರುವುದೆಲ್ಲವನ್ನೂ ದಾನ ಮಾಡಬೇಕಾಗಿತ್ತು. ಅವನಿಗೊಬ್ಬ ಮಗನಿದ್ದನು. ಅವನ ಹೆಸರು ನಚಿಕೇತ. ಅವನು ಯಾಗದಲ್ಲಿ ದಾನ ಕೊಡುವುದಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದ ಹಸುಗಳನ್ನು ನೋಡಿದನು. ಆಗ ಅವನ ಮನಸ್ಸಿನಲ್ಲಿ ಶ್ರದ್ಧೆಯು ಹುಟ್ಟಿತು. ಶ್ರದ್ಧೆಯೆಂದರೆ ಒಳ್ಳೆಯದರಲ್ಲಿ ಗೌರವ, ನಂಬಿಕೆ, ವಿಶ್ವಾಸ. ಅವನು ಹೀಗೆ ಯೋಚಿಸಿದನು: "ಈ ಹಸುಗಳಿಗೆ ವಯಸ್ಸಾಗಿಬಿಟ್ಟಿದೆ. ಅವುಗಳಿಗೆ ನೀರು ಕುಡಿಯುವುದಕ್ಕೂ ಶಕ್ತಿ ಇಲ್ಲ, ಹುಲ್ಲು ತಿನ್ನುವುದಕ್ಕೂ ಶಕ್ತಿ ಇಲ್ಲ, ಹಾಲು ಕೊಡುವುದಕ್ಕೂ ಶಕ್ತಿ ಇಲ್ಲ. ಅವುಗಳ ಇಂದ್ರಿಯಗಳೆಲ್ಲ ಮರಗಟ್ಟಿ ಹೋಗಿವೆ. ಇಂತಹ ಹಸುಗಳನ್ನು ದಾನವಾಗಿ ಕೊಟ್ಟರೆ, ನನ್ನ ತಂದೆ ದುಃಖವನ್ನು ಪಡೆಯುತ್ತಾನೆ. ಹಾಗೆ ಆಗದಂತೆ ನಾನು ತಡೆಯಬೇಕು. ಅದಕ್ಕಾಗಿ ನನ್ನನ್ನೇ ದಾನವಾಗಿ ಕೊಡುವಂತೆ ಕೇಳಿಕೊಳ್ಳಬೇಕು."

ಅನಂತರ ತಂದೆಯನ್ನು ಕುರಿತು, "ನನ್ನನ್ನು ಯಾರಿಗೆ ಕೊಡುತ್ತೀಯೆ?" ಎಂದು ಕೇಳಿದನು. ತಂದೆ ಉತ್ತರ ಕೊಡಲಿಲ್ಲ. ಮೂರು ಸಲ ಕೇಳಿದನು. ಅದರಿಂದ ಸಿಟ್ಟಿಗೆದ್ದ ಅವನ ತಂದೆ, "ನಿನ್ನನ್ನು ಯಮನಿಗೆ ಕೊಟ್ಟಿದ್ದೇನೆ" ಎಂದುಬಿಟ್ಟನು. ಯಮ ಎಂದರೆ ಸಾವಿನ ದೇವತೆ. ಸಿಟ್ಟಿನ ಭರದಲ್ಲಿ ಆಡಿದ ಮಾತಿಗೆ ವಾಜಶ್ರವಸ್ ತುಂಬ ಪಶ್ಚಾತ್ತಾಪ ಪಟ್ಟನು. ಆದರೆ ಏನು ಮಾಡುವುದು? ಯಜ್ಞದ ಸಮಯದಲ್ಲಿ ಆಡಿದ ಮಾತನ್ನು ಉಳಿಸಿಕೊಳ್ಳಲೇಬೇಕು. ತನ್ನ ತಂದೆಯ ಮಾತನ್ನು ಮೀರಲಾರದೆ, ನಚಿಕೇತನು ಯಮನ ಲೋಕಕ್ಕೆ ಹೋದನು; ಅವನಿಂದ ಆತ್ಮವಿದ್ಯೆ ಕಲಿತನು. ದೊಡ್ಡ ಪಂಡಿತನಾಗಿ ವಾಪಸ್ಸು ಬಂದನು. ಹೀಗೆ ತನ್ನ ತಂದೆಗೆ ಒಳ್ಳೆಯದಾಗಲೆಂಬ ಶ್ರದ್ಧೆಯಿಂದ ಬಾಲಕ ನಚಿಕೇತನು ಪ್ರಸಿದ್ಧನಾದನು.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: **"ಜಗತ್ತಿನ ಇತಿಹಾಸವು ಆತ್ಮಶ್ರದ್ಧೆಯುಳ್ಳ ವ್ಯಕ್ತಿಗಳ ಚರಿತ್ರೆ. ಈ ಆತ್ಮಶ್ರದ್ಧೆ ಸುಪ್ತವಾಗಿರುವ ದಿವ್ಯತೆಯನ್ನು ವ್ಯಕ್ತಗೊಳಿಸುವುದು. ನೀವು ಏನನ್ನಾದರೂ ಸಾಧಿಸಬಹುದು. ಶ್ರದ್ಧೆ! ಶ್ರದ್ಧೆ! ಆತ್ಮಶ್ರದ್ಧೆ! ಶ್ರದ್ಧೆ! ಶ್ರದ್ಧೆ! ಈಶ್ವರನಲ್ಲಿ ಶ್ರದ್ಧೆ! ಇದೇ ಮಹಾತ್ಮೆಯ ಮೂಲ. ನಿಮ್ಮಲ್ಲಿ ಆತ್ಮಶ್ರದ್ಧೆ ಇಲ್ಲದೇ ಇದ್ದರೆ ನಿಮಗೆ ಉದ್ಧಾರವಿಲ್ಲ. ಮೊದಲು ಆತ್ಮಶ್ರದ್ಧೆ ಇರಲಿ."** (ಮುಂದಿನ ತಿಂಗಳು: ಸ್ವಾವಲಂಬನೆ)



### ಒಳ್ಳೆಯ ಗುಣಗಳು

#### ಅಸ್ತೇಯ

ಅಸ್ತೇಯ ಎಂದರೆ ಕದಿಯದಿರುವುದು. ನಾವು ಬೇರೆಯವರ ವಸ್ತುಗಳನ್ನು ಕಂಡು ಆಸೆ ಪಡುತ್ತೇವೆ, ಅವುಗಳು ನಮ್ಮ ಹತ್ತಿರ ಇರಬೇಕು ಎಂದುಕೊಳ್ಳುತ್ತೇವೆ. ಹೀಗೆ ಬೇರೆಯವರ ವಸ್ತುವಿಗೆ ಆಸೆ ಪಡುವುದೂ ಒಂದು ತರಹದ ಕಳ್ಳತನವೇ ಅಲ್ಲವೇ? ಅದನ್ನು ಬಿಟ್ಟುಬಿಡಬೇಕು. ಇದನ್ನೇ ಅಸ್ತೇಯ ಎನ್ನುವುದು. ಈ ತರಹ ಆಸೆ ಪಡುವುದನ್ನು ಲೋಭ ಎಂದೂ ಕರೆಯುತ್ತಾರೆ. ಲೋಭಿಗಳು ಅನ್ಯಾಯದಿಂದ ಹಣ ಸಂಪಾದಿಸುತ್ತಾರೆ. ಅದರಿಂದ ಹಲವಾರು ಜನರು ಕಷ್ಟಪಡಬೇಕಾಗುತ್ತದೆ. ಹೆಚ್ಚು ಹೆಚ್ಚು ಜನ ಬಡವರಾಗುತ್ತಾರೆ. ಇದಕ್ಕೆ ಕಾರಣ ಕೆಲವು ಶ್ರೀಮಂತರ ಲೋಭತನ. ಸಮಾಜದ ಹಿತಕ್ಕಾಗಿ ಇದು ಒಳ್ಳೆಯದಲ್ಲ. ಲೋಭದಿಂದ ನಮ್ಮ ಮನಸ್ಸೂ ಕೆಟ್ಟುಹೋಗುತ್ತದೆ. ಒಳ್ಳೆಯ ಆಲೋಚನೆಗಳ ಬದಲು, ಹಣ ಸಂಪಾದಿಸುವ, ಅದನ್ನು ಹೇಗಾದರೂ ಮಾಡಿ ಕಾಯ್ದುಕೊಳ್ಳುವ ಕೆಟ್ಟ ಆಲೋಚನೆಗಳೇ ಕಾಡುತ್ತವೆ. ಅದರಿಂದ ಮನಸ್ಸಿಗೆ ಶಾಂತಿ ಇರುವುದಿಲ್ಲ. ಅದಲ್ಲದೆ ಹಣ, ಸಂಪತ್ತು, ಅಧಿಕಾರಗಳಿಗಾಗಿ ಜಗಳ ಆರಂಭವಾಗುತ್ತದೆ. ನಮ್ಮ ನೆಂಟರು, ಸ್ನೇಹಿತರು ನಮ್ಮಿಂದ ದೂರವಾಗಬಹುದು. ಆದ್ದರಿಂದ ಹಣ, ಸಂಪತ್ತುಗಳಿಗಾಗಿ ಅತಿ ಆಸೆ ಬೆಳೆಸಿಕೊಳ್ಳದಿರುವುದೇ ಒಳ್ಳೆಯದು.

(ಮುಂದಿನ ತಿಂಗಳು: ಬ್ರಹ್ಮಚರ್ಯ)

***ಶಕ್ತಿವಂತನಾಗುವುದು ಹೇಗೆ?***

ನೀವು ದುರ್ಬಲರೆಂದು ಯೋಚಿಸಿದರೆ ದುರ್ಬಲರಾಗುವಿರಿ. ಶಕ್ತಿವಂತರೆಂದು ಯೋಚಿಸಿದರೆ ಶಕ್ತಿವಂತರಾಗುವಿರಿ. 'ಇಲ್ಲ, ಸಾಧ್ಯವಿಲ್ಲ' ಎಂದು ಎಂದೂ ಹೇಳಬೇಡಿ. ನೀವು ಸರ್ವಶಕ್ತರು. ನೀವೆಲ್ಲ ಭಗವಂತನ ಮಕ್ಕಳು. ಅಮೃತಾನಂದದಲ್ಲಿ ಭಾಗಿಗಳು– ಪರಿಶುದ್ಧಾತ್ಮರು ನೀವು, ಪರಿಪೂರ್ಣರು ನೀವು. ಸಿಂಹಗಳೇ ಬನ್ನಿ. ನೀವು ಕುರಿಗಳು ಎಂಬ ಭ್ರಾಂತಿಯನ್ನು ಕೊಡಹಿ. ಅಮೃತ ಆತ್ಮರು ನೀವು, ಮುಕ್ತಾತ್ಮರು ನೀವು, ಆನಂದಮಯರು ನೀವು, ನಿತ್ಯಾತ್ಮರು ನೀವು.

*–ಸ್ವಾಮಿ ವಿವೇಕಾನಂದ*